(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ರಾಜ್ಯಕ್ಕೆ ಕಡಿಮೆ ಪರಿಹಾರ ಬಂದಿದೆ ಎಂದು ಸತ್ಯವನ್ನು ಹೇಳಿದ್ದಾರೆ. ಸಂತೋಷ. ಅಂದರೆ ಕರ್ನಾಟಕವನ್ನು ಮಲತಾಯಿಧೋರಣೆಯಲ್ಲಿ ಈ ಸರ್ಕಾರವೂ ಕಾಣುತ್ತದೆಂದು ತೀರ್ಮಾನವಾದಂತಲ್ಲವೆ?

ಉಪಾಧ್ಯಕ್ಷರು : ಈಗ ಮೊದಲು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ. ಅನಂತರ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದಂತೆ ಪ್ರಶ್ನೋತ್ತರದ ನಂತರ ಇದನ್ನು ತೆಗೆದುಕೊಳ್ಳುವುದಾದರೆ ಅಡ್ಡಿಯೇನಿಲ್ಲ. ಆದರೆ ಅದಕ್ಕೂ ಮೊದಲು ಮಂತ್ರಿಗಳು ಹೇಳಿಕೆಯನ್ನು ಕೊಟ್ಟರೆ ಹೇಗೆ? ಪ್ರಶ್ನೋತ್ತರವನ್ನು ರದ್ದು ಮಾಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿ.

ಶ್ರೀ ಎಂ. ಪಿ. ಪ್ರಕಾಶ್ : ಸದನದ ಸಮಿತಿಯವರು ಮಧ್ಯಂತರ ವರದಿಯನ್ನು ಸಲ್ಲಿಸಿದ್ದಾರೆಂದು ಇಲ್ಲಿ ಪ್ರಸ್ತಾಪವಾಗಿದ್ದರಿಂದ, ಆ ರೀತಿ ಮಧ್ಯಂತರ ವರದಿಯನ್ನು ಕೊಟ್ಟಿಲ್ಲವೆಂದು ಅವರು ಹೇಳುವಾಗ ಬೇರೆ ವಿಷಯವನ್ನೂ ಸಹ ಪ್ರಸ್ತಾಪ ಮಾಡಿದ್ದಾರೆ. ತಾವು ಈಗ ದಯಮಾಡಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರಗಳು.

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಮತೀಯ ಅಲ್ಪಸಂಖ್ಯಾತರಿಗಾಗಿ ವಸತಿ ಶಾಲೆಗಳು

145 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪ ಸಂಖ್ಯಾತರ ವಿದ್ಯಾಭ್ಯಾಸಕ್ಕಾಗಿ ಎಷ್ಟು ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ?

ಆ) ಈ ಶಾಲೆಗಳು ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ?

ಇ) ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಈ) ಈ ಶಾಲೆಗಳ ಉಸ್ತುವಾರಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಐದು

ಆ) 1. ರಾಮನಗರಂ, ಬೆಂಗಳೂರು ಗ್ರಾಮಾಂತರ ಜಿಲ್ಲೆ

2. ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ

3. ಕೋಟೆಕಾರ್, ಮಂಗಳೂರು ತಾ: ದಕ್ಷಿಣ ಕನ್ನಡ ಜಿಲ್ಲೆ

4. ಬಿಜಾಪುರ ನಗರ, ಬಿಜಾಪುರ ಜಿಲ್ಲೆ

5. ಗುಲ್ಬರ್ಗಾ ನಗರ, ಗುಲ್ಬರ್ಗಾ ಜಿಲ್ಲೆ

ಇ) 1. ರಾಮನಗರಂ - 112

2. ಶ್ರೀರಂಗಪಟ್ಟಣ - 63

3. ಕೋಟೆಕಾರ್, ಮಂಗಳೂರು - 154

4. ಬಿಜಾಪುರ - 145

5. ಗುಲ್ಬರ್ಗಾ - 151

ಈ) ಬೆಂಗಳೂರಿನ ಹಜರತ್ ಖ್ವಾಜಾ ಗರೀಬ್ ನವಾಜ್ ಚಾರಿಟಬಲ್ ಟ್ರಸ್ಟ್‌ನವರು ಈ ಐದು ಶಾಲೆಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಆದರೆ ರಾಜ್ಯದ ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ : 12.1.98 ರಂದು ಆದೇಶವನ್ನು ಹೊರಡಿಸಿ ದಿನಾಂಕ : 4.9.95ರ ಸರ್ಕಾರಿ ಆದೇಶವನ್ನು ರದ್ದು ಗೊಳಿಸಿದೆ.1998-99ನೇ ಶೈಕ್ಷಣಿಕ ವರ್ಷದಲ್ಲಿ ಈ ಶಾಲೆಗಳಿಗೆ ಪರ್ಯಾಯ ಆಡಳಿತ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಅಲ್ಪಸಂಖ್ಯಾತರಿಗಾಗಿ ಪ್ರಾರಂಭ ಮಾಡಿದಂತಹ ಐದು ವಸತಿ ಶಾಲೆಗಳನ್ನು ಒಂದು ಟ್ರಸ್ಟಿನ ಸುಬರ್ದಿಗೆ ವಹಿಸಿದ್ದೇವೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈ ಟ್ರಸ್ಟಿನ ಜವಾಬ್ದಾರಿ ಅಥವಾ ಉಸ್ತುವಾರಿಯನ್ನು ನೋಡಿಕೊಂಡಿರುವಂತಹವರು ಯಾರ್ಯಾರು? ಅವರ ಹೆಸರುಗಳನ್ನು ಮಾನ್ಯ ಮಂತ್ರಿಗಳು ದಯಮಾಡಿ ಇಲ್ಲಿ ಪ್ರಕಟ ಪಡಿಸಬೇಕು. ಇದು ಕೇವಲ ರಾಜಕೀಯ ಉದ್ದೇಶಕ್ಕಾಗಿ ಪ್ರಾರಂಭ ಮಾಡಿರುವಂತಹ ವಸತಿ ಶಾಲೆಗಳೋ ಅಥವಾ ನಿಜಕ್ಕೂ ಸರ್ಕಾರ ಕಾಳಜಿ ಇಟ್ಟು ಈ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶಿಕ್ಷಣ ನೀಡುವಂತಾದ್ದರ ಬಗ್ಗೆ ಈ ಸರ್ಕಾರ ಆಲೋಚನೆ ಮಾಡಿದೆಯೇ? ಇದು ನನ್ನ ಮೊದಲನೆಯ ಪ್ರಶ್ನೆ. ನನ್ನ ಇನ್ನೊಂದು ಪ್ರಶ್ನೆ ಏನೆಂದರೆ, ಈ ಶಾಲೆಗಳಿಗೆ ಇಲ್ಲಿಯವರೆಗೆ ಕಟ್ಟಡಗಳನ್ನು ಕಟ್ಟುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದೆ ಇದೆಯೇ? ಇದ್ದಲ್ಲಿ ಅದಕ್ಕಾಗಿ ಸರ್ಕಾರ ಹಮ್ಮಿ ಕೊಂಡಿರುವಂತಹ ಕಾರ್ಯಕ್ರಮಗಳು ಏನು? ಶ್ರೀರಂಗಪಟ್ಟಣದ ವಸತಿ ಶಾಲೆಯಲ್ಲಿ ಒದಗಿಸಲಾದ

ಆಹಾರದಲ್ಲಿ ವಿಷ ಬೆರೆತು ಕೆಲವು ಹುಡುಗರನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೇ? ಈ ಮೂರು ವಿಚಾರಗಳ ಬಗ್ಗೆ ಸರ್ಕಾರ ಉತ್ತರ ನೀಡಬೇಕಾಗಿ ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನ ಹಜರತ್ ಖ್ವಾಜಾ ಗರೀಬ್ ನವಾಜ್ ಚಾರಿಟಬಲ್ ಟ್ರಸ್ಟ್‌ನವರಿಗೆ ಈ ಐದು ವಸತಿ ಶಾಲೆಗಳ ಜವಾಬ್ದಾರಿಯನ್ನು ವಹಿಸಿರುತ್ತೇವೆ. ಇದರ ಉದ್ದೇಶ ಏನೆಂದರೆ, ಮುಸ್ಲಿಂ ಜನಾಂಗದಲ್ಲಿ ಬೇರೆ ಯಾರಿಗೇ ಕೊಟ್ಟರೂ ಅಥವಾ ಸರ್ಕಾರದವರೇ ನಡೆಸಿದರೆ ಸರಿಯಾಗುವುದಿಲ್ಲ ಅನ್ನತಕ್ಕಂಥ ಭಾವನೆಯನ್ನು ಇಟ್ಟುಕೊಂಡು, ಅವರು ಮುಂದೆ ಬಂದಿದ್ದರಿಂದ ಅವರಿಗೆ ಜವಾಬ್ದಾರಿಯನ್ನು ಕೊಟ್ಟಿರುತ್ತೇವೆ. ಬೆಂಗಳೂರಿನ ಹಜರತ್ ಖ್ವಾಜಾ ಗರೀಬ್ ನವಾಜ್ ಚಾರಿಟಬಲ್ ಟ್ರಸ್ಟಿನವರು ಈ ಶಾಲೆಗಳನ್ನು ನಡೆಸತಕ್ಕ ವ್ಯವಸ್ಥೆ ಮಾಡಿದ್ದೇವೆ. ಇನ್ನು ವಸತಿ ಶಾಲೆಗಳ ಕಟ್ಟಡ ನಿರ್ಮಾಣದ ಬಗ್ಗೆ ಹೇಳುವುದಾದರೆ. ಈ ವಸತಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಹಣ ಕೊಡುವುದಿಲ್ಲ. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳಿಗೆ ಯಾವ ರೀತಿ ಕೊಡುತ್ತೇವೆಯೋ ಅದೇ ರೀತಿಯಲ್ಲಿಯೂ ಇಲ್ಲಿಯೂ ಕೂಡ ಪ್ರತಿ ವಿದ್ಯಾರ್ಥಿಗೆ 500 ರೂ.ಗಳನ್ನು ಪ್ರತಿ ತಿಂಗಳಿಗೆ ನಾವು ಕೊಡುತ್ತಿದ್ದೇವೆ. ಕಟ್ಟಡ ಉಪಕರಣಗಳು ಇತ್ಯಾದಿಗಳಿಗೆ ಅವರೇ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಈ ವಸತಿ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಿಸುವುದು ಹಾಗೂ ಅವರಿಗೆ ಸಂಬಳ ನೀಡುವುದು, ಇವೆರಡೇ ನಮ್ಮ ಜವಾಬ್ದಾರಿ. ಉಳಿದ ಜವಾಬ್ದಾರಿಯನ್ನು ಮ್ಯಾನೇಜ್‌ಮೆಂಟಿನವರು ಯಾರಿರುತ್ತಾರೆ ಅವರೇ ಅದನ್ನು ನಡೆಸಿಕೊಂಡು ಹೋಗುತ್ತಾರೆ. ತಮ್ಮ ಮತ್ತೊಂದು ಪ್ರಶ್ನೆ ನನಗೆ ಮರೆತು ಹೋಯಿತಲ್ಲಾ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಈ ವಸತಿ ಶಾಲೆಗಳ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನು ತೆಗೆದುಕೊಂಡಿರುವಂತಹ ಟ್ರಸ್ಟಿಗಳ ಹೆಸರುಗಳು ಏನು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿದೆ. 'ಹಜರತ್ ಖ್ವಾಜಾ ಗರೀಬ್ ನವಾಜ್ ಚಾರಿಟಬಲ್ ಟ್ರಸ್ಟ್' ಎಂದು ಹೇಳಿದರೆ, ನಾನೂ ಕೂಡ ಆ ಹೆಸರನ್ನು ಇಟ್ಟುಕೊಳ್ಳಬಹುದು. 1995ರಲ್ಲಿ ಟ್ರಸ್ಟ್‌ಗೆ ಮಾನ್ಯತೆ ಕೊಟ್ಟಿರುವಂತಹ ಸರ್ಕಾರಿ ಆದೇಶ ನನ್ನ ಹತ್ತಿರ ಇದೆ. ಅದರ ಉಸ್ತುವಾರಿ ನೋಡಿಕೊಳ್ಳುತ್ತಿರುವಂತಹ ವ್ಯಕ್ತಿಗಳು ಯಾರು ಎನ್ನುವ ವಿವರ ನನಗೆ ಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೆ, ಸದ್ಯಕ್ಕೆ ನನ್ನ ಹತ್ತಿರ ವ್ಯಕ್ತಿಗಳ ಹೆಸರು ಇಲ್ಲ. ನಾನು ಅವರಿಗೆ ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಟ್ರಸ್ಟಿಗಳು ಯಾರು ಎಂಬುದನ್ನು ನೀವು ನಮಗೆ ಹೇಳಿ. ಅವರು ಹೆಸರುಗಳೇ ನಿಮಗೆ ಗೊತ್ತಿಲ್ಲದಿದ್ದರೆ, ಅವರೇ ಶಾಲೆಗಳನ್ನು ನಡೆಸುತ್ತಿದ್ದಾರೆ ಎಂದು ಹೇಗೆ ಗೊತ್ತಾಗುತ್ತದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಆ ಬಗ್ಗೆ ನಾನು ನೋಡುತ್ತೇನೆ. ಆ ಬಗ್ಗೆ ಎಲ್ಲಾ ಡೀಟೈಲ್ಸ್ ಇದೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಒಂದು ಸಂಸ್ಥೆ ನಡೆಸಬೇಕಾದರೆ, ಒಂದು ಅಸೋಸಿಯೇಷನ್ನೋ ಅಥವಾ ರಿಜಿಸ್ಟರ್ಡ್ ಸೊಸೈಟಿಯೋ ಇರಬೇಕು.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅದು ರಿಜಿಸ್ಟರ್ಡ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ರಿಜಿಸ್ಟರ್ಡ್ ಆಗಿದ್ದರೆ ಟ್ರಸ್ಟೀಸ್ ನೇಮ್ಸ್ ಏಕೆ ಗೊತ್ತಿಲ್ಲ? ಟ್ರಸ್ಟಿಗಳ ಹೆಸರು...

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನ ಹಜರತ್ ಖ್ವಾಜಾ ಗರೀಬ್ ನವಾಜ್ ಚಾರಿಟಬಲ್ ಟ್ರಸ್ಟ್‌ನವರು ಈ ವಸತಿ ಶಾಲೆಗಳನ್ನು ನಡೆಸುತ್ತಿದ್ದಾರೆ. ನಿಮಗೆ ಇನ್ನು ಮುಂದೆ ಡೀಟೈಲ್ಸ್ ಕೊಡುತ್ತೇನೆ. ಈ ವಸತಿ ಶಾಲೆಗಳು ಸರಿಯಾಗಿ ನಡೆಯುತ್ತಿಲ್ಲ, ಅದರ ಅವಶ್ಯಕತೆ ಸರಿಯಾಗಿ ನಡೆಯುತ್ತಿಲ್ಲ, ಅದರ ಅವಶ್ಯಕತೆ ಸರಿಯಾಗಿ ಜನಗಳಿಗೆ ಉಪಯೋಗ ಆಗುತ್ತಿಲ್ಲ ಎಂದು ಕೆಲವರು ಕೋರ್ಟ್‌ಗೆ ಹೋಗಿದ್ದರು. ವಸತಿ ಶಾಲೆಗಳ ಉಸ್ತುವಾರಿಯನ್ನು ಆ ಟ್ರಸ್ಟ್‌ಗೆ ವಹಿಸಿದ ಸರ್ಕಾರಿ ಆದೇಶವನ್ನು ಹೈಕೋರ್ಟ್ ಜನವರಿಯಲ್ಲಿ ರದ್ದುಗೊಳಿಸಿದೆ. ಹೈಕೋರ್ಟ್‌ನ ಈ ತೀರ್ಮಾನದ ಕಾಪಿ ಇನ್ನೂ ನಮಗೆ ಬಂದಿಲ್ಲ, ಅದಕ್ಕಾಗಿ ಅಪ್ಲೈ ಮಾಡಿದ್ದೇವೆ. ಕೋರ್ಟ್‌ನಲ್ಲಿ ಆ ಟ್ರಸ್ಟ್‌ಗೆ ವಹಿಸಿರತಕ್ಕದ್ದು ಸರಿಯಿಲ್ಲವೆಂದು ತೀರ್ಮಾನವಾಗಿರುವುದರಿಂದ, ಅವರಿಗೆ ವಹಿಸತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀ ಸಿ.ಆರ್. ಸಗೀರ್. ಅಹಮದ್ : ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು : ಈ ವಸತಿ ಶಾಲೆಗಳನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂದು ನೀವು ಕೇಳಿದಿರಿ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದರು. ಹೆಸರುಗಳನ್ನು ತಿಳಿಸುವಂತೆ ನೀವು ಕೋರಿದಿರಿ, ಮಾಹಿತಿ ತರಿಸಿಕೊಂಡು ನಾನು ನಿಮಗೆ ಕೊಡುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನೀವೇನು ಪ್ರಶ್ನೆ ಕೇಳಿದೀರೋ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರಿಸಿದ್ದಾರಲ್ಲಾ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಹಜರತ್ ಖ್ವಾಜಾ ಗರೀಬ್ ನವಾಜ್ ಚಾರಿಟಬಲ್ ಟ್ರಸ್ಟ್ ಎಂಬ ಎರಡು ಟ್ರಸ್ಟ್‌ಗಳು ಇವೆ. ಗುಲ್ಬರ್ಗಾ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹಜರತ್ ಖ್ವಾಜಾ ಗರೀಬ್ ಟ್ರಸ್ಟ್ ಎಂದು ಅಲ್ಲಿಯ ಬಂದೇ ನವಾಜ್‌ಗೆ ಸಂಬಂಧಪಟ್ಟಂತಹ ಅಧ್ಯಕ್ಷರು ಆ ಟ್ರಸ್ಟ್ ಅನ್ನು ನೋಡಿಕೊಂಡು ಹೋಗುತ್ತಿದ್ದಾರೆ. ಈ ಟ್ರಸ್ಟ್‌ಗೆ ಈ ವಸತಿ ಶಾಲೆಗಳನ್ನು ವಹಿಸಿದ್ದಾರೋ ಅಥವಾ ಪ್ರತ್ಯೇಕವಾಗಿ ಬೆಂಗಳೂರು ನಗರದಲ್ಲಿ ಒಂದು ಸ್ಥಾಪನೆಯಾಗಿದೆಯೇ ಎಂಬ ಬಗ್ಗೆ ನನಗೆ ಮಾಹಿತಿ ಸಿಗುತ್ತಿಲ್ಲ. ಈ ಸಂಸ್ಥೆ ವಿದ್ಯಾರ್ಥಿಗಳ ಜೊತೆ ಕಣ್ಣುಮುಚ್ಚಾಲೆ ಆಟ ಆಡುತ್ತಿದೆ ಎಂಬ ಆರೋಪ ಇದೆ. ಮಾನ್ಯ ಮಂತ್ರಿಗಳು ಇಲ್ಲಿ ಟ್ರಸ್ಟ್‌ಗೆ ನಾವು ಗ್ರಾಂಟ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಟ್ರಸ್ಟ್‌ನವರು ಇಲ್ಲಿಯವರೆಗೆ ಸರ್ಕಾರ ನಮಗೆ ಯಾವುದೇ ರೀತಿಯ ಅನುದಾನವನ್ನು ಬಿಡುಗಡೆ ಮಾಡಿಲ್ಲವೆಂದು ಹೇಳುತ್ತಾರೆ. ಖಾಸಗಿಯವರೇ ವ್ಯವಸ್ಥಿತವಾಗಿ ನಡೆಸಿಕೊಂಡು

ಹೋಗುತ್ತಿರುವಂತಹ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಅವರಿಗೆ ಸಿಗಬೇಕಾದಂತಹ ಸವಲತ್ತುಗಳು ಸಿಗುತ್ತಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಉಪಾಧ್ಯಾಯರ ಸಂಬಳ ಮತ್ತು ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ 500 ರೂ. ಕೊಡುತ್ತಿದ್ದಾರೆ. ಉಳಿದಂತೆ ಶಾಲೆಯ ಮೇಲ್ವಿಚಾರಣೆ, ಕಟ್ಟಡ, ಉಪಕರಣಗಳು ಎಲ್ಲದರ ಬಗ್ಗೆ ಅವರೇ ನೋಡಿಕೊಳ್ಳುತ್ತಾರೆ. ನಿಮ್ಮ ಮಾಹಿತಿಗಾಗಿ ಒಂದೆರೆಡು ವಿಷಯಗಳನ್ನು ತಿಳಿಸುತ್ತೇನೆ. ಇದು 1995-96ರಲ್ಲಿ ನಡೆಯಲಿಲ್ಲ. ಇದು 1996-97ರಲ್ಲಿ ನಡೆದಿದೆ. ಈ ಸಾಲಿನಲ್ಲಿ ಗುಲ್ಬರ್ಗಾದಲ್ಲಿರುವ ಶಾಲೆಗೆ 3 ಲಕ್ಷ 30 ಸಾವಿರ ರೂ.ಗಳನ್ನು ಖರ್ಚು ಮಾಡಿದ್ದೇವೆ. ದುಡ್ಡು ಬಿಡುಗಡೆಯಾಗಿಲ್ಲವೆಂದು ತಾವು ಆಗಲೇ ಹೇಳಿದಿರಿ, ಅದು ಸರಿಯಲ್ಲ. ಬಿಜಾಪುರದ ಶಾಲೆಗೆ 1996-97ರಲ್ಲಿ 4 ಲಕ್ಷ 93 ಸಾವಿರ ರೂ.ಗಳನ್ನು, ಮಂಗಳೂರಿನಲ್ಲಿರುವ ಶಾಲೆಗೆ 4 ಲಕ್ಷ 54 ಸಾವಿರ ರೂ.ಗಳನ್ನು, ರಾಮನಗರದ ಶಾಲೆಗೆ 5 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ರಾಮನಗರದ ಶಾಲೆ ಇತ್ತೀಚೆಗೆ ಶುರುವಾಗಿದೆ. 1997-98ನೇ ಸಾಲಿಗೆ ಗುಲ್ಬರ್ಗಾ ಶಾಲೆಗೆ 13 ಲಕ್ಷ 10 ಸಾವಿರ ರೂ.ಗಳನ್ನು, ಮಂಗಳೂರಿನ ಕೋಟೆಕಾರ್‌ನಲ್ಲಿರುವ ಶಾಲೆಗೆ 13 ಲಕ್ಷ 86 ಸಾವಿರ ರೂ.ಗಳನ್ನು ಬಿಜಾಪುರದ ಶಾಲೆಗೆ 9 ಲಕ್ಷ 43 ಸಾವಿರ ರೂ.ಗಳನ್ನು, ರಾಮನಗರದ ಶಾಲೆಗೆ 3 ಲಕ್ಷ 96 ಸಾವಿರ ರೂ.ಗಳನ್ನು ಖರ್ಚು ಮಾಡಿದ್ದೇವೆ. ಶ್ರೀ ರಂಗಪಟ್ಟಣದ ಶಾಲೆ ಲೇಟಾಗಿ ಶುರುವಾಯಿತು, ಅದಕ್ಕೆ 1 ಲಕ್ಷ 65 ಸಾವಿರ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದೇವೆ. ಈ ಹಣ ಉಪಾಧ್ಯಾಯರ ಸಂಬಳ ಮತ್ತು ಮಕ್ಕಳ ಊಟ, ವಸತಿಗಾಗಿ ಮಾತ್ರ ಸರ್ಕಾರ ಬಿಡುಗಡೆ ಮಾಡುತ್ತಿದೆ. ಇರುವ ಮಾಹಿತಿಗಳೆಲ್ಲವನ್ನೂ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ನಿಮಗೆ ಡೀಟೈಲ್ಸ್ ಏನಾದರೂ ಬೇಕಾದರೆ ನಾನು ತರಿಸಿ ಕೊಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ...

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಆಗಲೇ ಉತ್ತರ ಹೇಳಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ...

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ತಾವು ದಯಮಾಡಿ ನನಗೆ ನ್ಯಾಯ ಒದಗಿಸಿಕೊಡಬೇಕು...

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ನೀವು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದಾರೆ. ಬೇರೆ ಮಾಹಿತಿ ಬೇಕಾದರೆ ತರಿಸಿಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ಹೀಗಿರುವಾಗ ತಾವು ಸುಮ್ಮನೆ ನಿಂತು ಮಾತನಾಡಿದರೆ ಹೇಗೆ? ಬೇರೆ ಪ್ರಶ್ನೆಗಳೂ ಇವೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ... 2ನೇ ಟ್ರಸ್ಟ್ ಎಂದು ಹೇಳಿದರೆ, ಇದರ ನೇತೃತ್ವ ವಹಿಸಿರುವವರು ಯಾರು ಎಂದು ನಾನು ಕೇಳಬಾರದೇ?....

ಉಪಾಧ್ಯಕ್ಷರು : ಬೇರೆ ಮಾಹಿತಿ ಬೇಕಾದರೆ ಒದಗಿಸಿಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ತಮ್ಮ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸಗೀರ್‌ರವರೇ, ತಾವು ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದವರು, ತಾವು ಈ ರೀತಿ ಮಾತನಾಡಿದರೆ ಹೇಗೆ? ದಯವಿಟ್ಟು ಕುಳಿತುಕೊಳ್ಳಿ.

ಹಾವು ಮತ್ತು ನಾಯಿ ಕಡಿತಕ್ಕೆ ಔಷಧ ಹಾಗೂ ಮಂಗನ ಕಾಯಿಲೆಯನ್ನು ನಿಯಂತ್ರಿಸುವ ಬಗ್ಗೆ

147 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾವು ಮತ್ತು ಹುಚ್ಚುನಾಯಿ ಕಡಿತಕ್ಕೆ ಔಷಧಿಗಳನ್ನು ಸರ್ಕಾರದವರು ಒದಗಿಸುತ್ತಿದ್ದಾರೆಯೇ?*

ಆ) *ಮಂಗನ ಕಾಯಿಲೆ ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಇ) *ಕರುಳ ಬೇನೆ ಪ್ರತಿ ವರ್ಷ ಕಾಣಿಸಿಕೊಳ್ಳುತ್ತಿದ್ದು ಇದನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು

ಆ) ಈ ಕಾಯಿಲೆಯು ಸಾಮಾನ್ಯವಾಗಿ ಮಲೆನಾಡು ಪ್ರದೇಶಗಳಾದ ಚಿಕ್ಕಮಗಳೂರು ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದು, ಅದರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಸಮೀಕ್ಷೆ
3. ರಕ್ತ ಮಾದರಿ ಸಂಗ್ರಹಣೆ ಮತ್ತು ಪರೀಕ್ಷೆ
3. ರೋಗ ನಿರೋಧಕ ಚುಚ್ಚುಮದ್ದು (ಲಸಿಕೆ)ಗಳನ್ನು ಕೊಡಲಾಗುತ್ತಿದೆ. ಉಚಿತವಾಗಿ ಸಾಕಷ್ಟು ಪ್ರಮಾಣದಲ್ಲಿ ರೋಗ ತಗುಲಿದ ವ್ಯಕ್ತಿಗಳಿಗೆ ಲಸಿಕೆ ಕೊಡಲಾಗುವುದು.
4. ಸಾರ್ವಜನಿಕರಿಗೆ ಈ ರೋಗದ ಬಗ್ಗೆ ಮತ್ತು ರೋಗದ ಸೋಂಕಿನಿಂದ ದೂರವಿರಲು ಮತ್ತು, ಸೋಂಕು ತಗುಲದಂತೆ ಇರಲು ಪಾಲಿಸಬೇಕಾದ ಕೆಲವು ಸುಲಭೋಪಾಯಗಳ ಬಗ್ಗೆ ಮಾಹಿತಿಯನ್ನು ಈ ಕೆಳಕಂಡ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿ ತಿಳುವಳಿಕೆ ನೀಡಲಾಗುತ್ತಿದೆ.

ಅ) ರೇಡಿಯೋ, ಟಿ.ವಿ. ಕಾರ್ಯಕ್ರಮ

ಆ) ಬಿತ್ತಿ ಪತ್ರಗಳು, ಕರಪತ್ರಗಳು

ಇ) ಆರೋಗ್ಯ ಕಾರ್ಯಕರ್ತರ ಮೂಲಕ ವಿಷಯವನ್ನು ವಿವರಿಸಿ ಹೇಳಲಾಗುತ್ತಿದೆ.